# ನಿಮ್ಮೊಡನೆ

## ಕನಸನ್ನು ಕರಗಿಸುವ ಕಷ್ಟ

ಚಿನ್ನದ ಠೇವಣಿ ಯೋಜನೆ ಕುರಿತು ಜನರಲ್ಲಿ ತಿಳಿವಳಿಕೆ ಕೊರತೆಯೂ ಇದೆ. ಅದರ ಪ್ರಯೋಜನಗಳ ಬಗ್ಗೆ ಅರಿವು ಮೂಡಿಸುವ ಕೆಲಸ ಆಗಬೇಕು. ಠೇವಣಿ ಇಟ್ಟರೆ ಮುಂದೆ ಹೇಗೋ ಏನೋ ಎಂಬ ಆತಂಕಗಳಿವೆ. ಅವುಗಳನ್ನು ನಿವಾರಿಸಬೇಕು. ಆಭರಣಗಳನ್ನು ಕರಗಿಸುವ ಪ್ರಕ್ರಿಯೆಯ ಪಾರದರ್ಶಕತೆಯನ್ನು ಖಾತರಿಪಡಿಸಬೇಕು.

ಬಂಗಾರದ ಜೊತೆ ಭಾರತೀಯರ ನಂಟು ತಕ್ಕಡಿಯ ತೂಕಕ್ಕೆ ಸಿಗುವಂಥದ್ದಲ್ಲ. ಆಭರಣಗಳೆಂದರೆ ನಮ್ಮ ಹೆಣ್ಣು ಮಕ್ಕಳಿಗೆ ಎಲ್ಲಿಲ್ಲದ ಮೋಹ. ಆಪತ್ಕಾಲದ ನಿಧಿಯಾಗಿಯೂ ಚಿನ್ನಕ್ಕೆ ಸಾಟಿ ಇನ್ನೊಂದಿಲ್ಲ. ಹಬ್ಬ, ಆಚರಣೆ, ನಿಶ್ಚಿತಾರ್ಥ, ಮದುವೆ, ನಾಮಕರಣ, ಹುಟ್ಟುಹಬ್ಬಗಳವರೆಗೂ ಈ ಹಳದಿ ಲೋಹ ನಮ್ಮ ಬದುಕಿನ ಭಾಗವಾಗಿದೆ. ಉಂಗುರ ರೂಪದಲ್ಲಿ ಬೆರಳನ್ನೋ, ಓಲೆಯಾಗಿ ಕಿವಿಯನ್ನೋ ಅಲಂಕರಿಸಿರುತ್ತದೆ. ಒಡವೆ ಮೋಹದಿಂದಲೋ, ಸಂದರ್ಭಾನುಸಾರವೋ ಹೀಗೆ ಮನೆ ಸೇರುವ ಆಭರಣಗಳಲ್ಲಿ ಹೆಚ್ಚಿನವು ದೈನಂದಿನ ಬಳಕೆಯಿಂದ ದೂರ ಸರಿದು ಕಪಾಟುಗಳಲ್ಲಿ ಭದ್ರಗೊಳ್ಳುತ್ತವೆ. ಇಲ್ಲವೇ ಬ್ಯಾಂಕ್ ಲಾಕರ್ ಸೇರಿ ಹೊಳಪು ಕಳೆದುಕೊಳ್ಳುತ್ತವೆ. ಬಳಕೆಯಲ್ಲಿ ಇಲ್ಲದ ಇಂಥ ಚಿನ್ನವನ್ನು ಚಲಾವಣೆಗೆ ತರಲು ಕೇಂದ್ರ ಸರ್ಕಾರ, 'ಗೋಲ್ಡ್ ಮಾನಿಟೈಸೇಷನ್ ಸ್ಕೀಮ್' ರೂಪಿಸಿದೆ. ಆದರೆ, ಈ ಯೋಜನೆಗೆ ನೀರಸ ಸ್ಪಂದನ ವ್ಯಕ್ತವಾಗಿದೆ ಎಂದು ವರದಿಯಾಗಿದೆ. ಆಭರಣ ಹಳೆಯದಾದರೂ ಅದರ ಜೊತೆಗಿನ ನಮ್ಮ ಭಾವನಾತ್ಮಕ ನಂಟು ಬಲವಾದುದು. ಅಂಥ ಒಡವೆಗಳನ್ನು ಕರಗಿಸಿ, ಬ್ಯಾಂಕ್ ಠೇವಣಿಯಾಗಿ ಪರಿವರ್ತಿಸುವುದು ನಮ್ಮಂಥ ಆಭರಣಪ್ರಿಯ ದೇಶದಲ್ಲಿ ತ್ರಾಸದ ಕೆಲಸ. ಚಿನ್ನವನ್ನು ನಾಣ್ಯೀಕರಿಸುವ ನಿಟ್ಟಿನಲ್ಲಿ ಜನರ ಮನವೊಲಿಸುವುದು ಘೋಷಣೆ ಹೊರಡಿಸುವಷ್ಟು ಸುಲಭವಲ್ಲ. ಆ ಕಷ್ಟ ಸರ್ಕಾರಕ್ಕೆ ಈಗ ಮನವರಿಕೆ ಆಗಿರಬಹುದು.

ಚಿನ್ನದ ಠೇವಣಿ, ಚಿನ್ನದ ಬಾಂಡ್‌ನಂಥ ಯೋಜನೆಗಳ ಹಿಂದಿನ ಉದ್ದೇಶ ಒಳ್ಳೆಯದೇ. ದೇಶದಲ್ಲಿ ಸುಮಾರು 20 ಸಾವಿರ ಟನ್‌ಗಳಷ್ಟು ಚಿನ್ನ ಅನುಪಯುಕ್ತವಾಗಿ ಬಿದ್ದಿದೆ. ಇಂಥ ಅನುತ್ಪಾದಕ ಚಿನ್ನವನ್ನು ಬ್ಯಾಂಕ್‌ನಲ್ಲಿ ಠೇವಣಿ ಇರಿಸಿದರೆ ಬಡ್ಡಿ ದೊರೆಯುತ್ತದೆ. ಹಳೆ ಆಭರಣಗಳನ್ನು ಕರಗಿಸಿ, ಗಟ್ಟಿ ಚಿನ್ನವನ್ನಾಗಿ ಪರಿವರ್ತಿಸಿದರೆ ಆಭರಣ ತಯಾರಕರಿಗೆ ಕಚ್ಚಾ ಸಾಮಗ್ರಿ ಸಿಗುತ್ತದೆ ಅರ್ಥಾತ್ ಮರುಬಳಕೆಗೆ ಅವಕಾಶ ಸಿಗುತ್ತದೆ. ಚಿನ್ನದ ದೇಶಿ ಬೇಡಿಕೆ ಪೂರೈಸಲು ಆಮದನ್ನು ಅವಲಂಬಿಸಬೇಕಾದ ಪ್ರಮೇಯ ಕೂಡ ತಪ್ಪುತ್ತದೆ. ಇವೆಲ್ಲ ಆರ್ಥಿಕತೆಗೆ ಸಂಬಂಧಿಸಿದ ವಿಚಾರಗಳು. ಒಪ್ಪುವಂಥವುಗಳೇ. ಆದರೆ ಚಿನ್ನ ಮತ್ತು ಚಿನ್ನದ ಆಭರಣಗಳಿಗೆ ಸಂಬಂಧಿಸಿದ ವಿಚಾರ ನಮ್ಮಲ್ಲಿ ಮನಸ್ಸಿಗೆ, ಭಾವನೆಗಳಿಗೆ ಸಂಬಂಧಿಸಿದ್ದು. ವಿದೇಶಿ ವಿನಿಮಯ ನೆಲೆಯಲ್ಲೋ, ಕಳ್ಳಸಾಗಣೆ ನಿಗ್ರಹ ನಿಟ್ಟಿನಲ್ಲಿಯೋ ಜನಸಾಮಾನ್ಯರು ಯೋಚಿಸಲಾರರು. ಸಣ್ಣ ಸಣ್ಣ ಖುಷಿ ವಿಚಾರಗಳಿಗೆ ಲಾಭ–ನಷ್ಟದ ಲೆಕ್ಕಾಚಾರ ಅಷ್ಟಾಗಿ ಒಪ್ಪುವುದಿಲ್ಲ. ಆಭರಣಗಳಂಥವೂ ಇದರ ವ್ಯಾಪ್ತಿಗೆ ಸೇರುತ್ತವೆ.

ಚಿನ್ನದ ಠೇವಣಿ ಯೋಜನೆ ಕುರಿತು ಜನರಲ್ಲಿ ತಿಳಿವಳಿಕೆ ಕೊರತೆಯೂ ಇದೆ. ಅದರ ಪ್ರಯೋಜನಗಳ ಬಗ್ಗೆ ಅರಿವು ಮೂಡಿಸುವ ಕೆಲಸ ಆಗಬೇಕು. ಠೇವಣಿ ಇಟ್ಟರೆ ಮುಂದೆ ಹೇಗೋ ಏನೋ ಎಂಬ ಆತಂಕಗಳಿವೆ. ಅವುಗಳನ್ನು ನಿವಾರಿಸಬೇಕು. ಆಭರಣಗಳನ್ನು ಕರಗಿಸುವ ಪ್ರಕ್ರಿಯೆಯ ಪಾರದರ್ಶಕತೆಯನ್ನು ಖಾತರಿಪಡಿಸಬೇಕು. ಪರಿಶುದ್ಧತೆಯನ್ನು ಪರೀಕ್ಷಿಸುವ ಕೇಂದ್ರಗಳ ಸಂಖ್ಯೆ ಹೆಚ್ಚಿಸಬೇಕು. ಬಡ್ಡಿ ದರ ಹೆಚ್ಚಳ ಸೇರಿದಂತೆ ಯೋಜನೆಯನ್ನು ಮತ್ತಷ್ಟು ಆಕರ್ಷಕಗೊಳಿಸಿದರೆ ಕ್ರಮೇಣ ಜನರ ಒಲವು ಗಳಿಸಲು ಸಾಧ್ಯವಾಗಬಹುದು. ಚಿನ್ನವನ್ನು ಭೌತಿಕವಾಗಿ ಖರೀದಿಸುವುದಕ್ಕೆ ಪರ್ಯಾಯವಾಗಿ ಗೋಲ್ಡ್ ಬಾಂಡ್ ಖರೀದಿಸುವುದಕ್ಕೆ ಕೂಡ ಇನ್ನೂ ಹೆಚ್ಚಿನ ಉತ್ತೇಜನ ಅಗತ್ಯ. ಚಿನ್ನದ ಬಗ್ಗೆ ಜನರ ವಿಶ್ವಾಸ ಅಚಲವಾದುದು. ಕಷ್ಟ ಕಾಲದಲ್ಲಿ ಕೈಹಿಡಿಯುತ್ತದೆ ಎಂಬ ಭಾವನೆ ಬಲವಾಗಿ ಬೇರೂರಿದೆ. ಆರ್ಥಿಕ ಅನಿಶ್ಚಿತತೆ ಇರುವಷ್ಟೂ ಕಾಲ ಚಿನ್ನದ ಬೇಡಿಕೆಗೆ ಭಂಗ ಇರಲಾರದು ಅಂತ ಅನ್ನಿಸುತ್ತದೆ. ಒಡವೆ ಕರಗಿಸುವುದೆಂದರೆ ಸವಿನೆನಪುಗಳ ನಂಟು ತುಂಡರಿಸಿಕೊಂಡಂತೆ ಎಂದು ಭಾವಿಸುವವರ ಸಂಖ್ಯೆಯೂ ದೊಡ್ಡದಿದೆ. ಅದನ್ನು ಬಿಟ್ಟುಕೊಡಬೇಕಾದರೆ ದೊಡ್ಡ ಮಟ್ಟದ ಸೆಳೆತ ಇರಲೇಬೇಕು. ಚಿನ್ನದ ಠೇವಣಿ ಯೋಜನೆ ಯಶಸ್ವಿಯಾಗಬೇಕಾದರೆ ಅಂತಹದ್ದೊಂದು ಉತ್ತೇಜಕ ಅದರಲ್ಲಿ ಅಡಕಗೊಳ್ಳಬೇಕು.

★ ಎನ್. ಉದಯಕುಮಾರ್




ಈಶ್ವರ್